ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

ಕಡತ ಸಂ:ಸಿಪಿಇ(2)/ಪಾದರಕ್ಷೆ (ಷೂ)-02/2017-18 ದಿನಾಂಕ:27.07.2017

**- ಸುತ್ತೋಲೆ -**

ವಿಷಯ:- 2017-18ನೇ ಸಾಲಿಗೆ ರಾಜ್ಯದಲ್ಲಿನ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಮಕ್ಕಳಿಗೆ ಉಚಿತವಾಗಿ ಒದಗಿಸಲಾಗುತ್ತಿರುವ ಷೂ ಮತ್ತು ಸಾಕ್ಸ್ ಖರೀದಿ ಪ್ರಕ್ರಿಯೆಯನ್ನು ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ

ಉಲ್ಲೇಖ:- 1. ಷೂ ಮತ್ತು ಸಾಕ್ಸ್ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಸರ್ಕಾರದ ಆದೇಶ ಸಂಖ್ಯೆ: ಇಡಿ 97 ಯೋಯೋಕ 2017 ದಿನಾಂಕ:22/05/2017.
2. ಈ ಕಛೇರಿ ಸುತ್ತೋಲೆ ದಿನಾಂಕ: 27/05/2017.

<><><><>

2017-18ನೇ ಶೈಕ್ಷಣಿಕ ಸಾಲಿಗೆ ರಾಜ್ಯದಲ್ಲಿನ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಒಂದು ಜೊತೆ ಷೂ ಮತ್ತು ಎರಡು ಜೊತೆ ಸಾಕ್ಸ್ ಗಳನ್ನು ಖರೀದಿ ಮಾಡಲು ಈಗಾಗಲೇ ಅನುದಾನವನ್ನು ಆಯಾ ಶಾಲಾ ಎಸ್.ಡಿ.ಎಂ.ಸಿ ಖಾತೆಗಳಿಗೆ ಜಮೆ ಮಾಡಲಾಗಿದೆ.

ಇದೀಗ ಸಾರ್ವಜನಿಕ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನ ಲಿಂಕ್‌ನ "ಪ್ರೋತ್ಸಾಹದಾಯಕ ಯೋಜನೆ ನಿರ್ವಹಣೆ(ಷೂ ಮತ್ತು ಸಾಕ್ಸ್)"ಯಲ್ಲಿ ಖರೀದಿ ಮಾಡಿದ ವಿವರವನ್ನು ಸಂಬಂಧಿಸಿದ ಸಿ.ಆರ್.ಪಿಗಳು ಕೂಡಲೇ ತಂತ್ರಾಂಶದಲ್ಲಿ ಅಳವಡಿಸತಕ್ಕದ್ದು.

ಈ ಬಗ್ಗೆ ವಿವರವಾದ ಕೈಪಿಡಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ(www.schooleduation.kar.nic.in) ಅಪ್‌ಲೋಡ್ ಮಾಡಲಾಗಿದ್ದು, ಕೈಪಿಡಿ ಹಾಗೂ ತಂತ್ರಾಶದಲ್ಲಿರುವ ಸೂಚನೆಗಳನ್ನು ಅನುಸರಿಸಿ ಸಿ.ಆರ್.ಪಿ ID ಯನ್ನು login ID ಹಾಗೂ password ಆಗಿ ಬಳಸಿ ಮಾಹಿತಿಯನ್ನು ಭರ್ತಿಮಾಡುವುದು. ತಂತ್ರಾಶದಲ್ಲಿ ನಿಖರವಾದ ಮಾಹಿತಿಯನ್ನು ದಿನಾಂಕ:14/08/2017ರ ಒಳಗಾಗಿ ಅಳವಡಿಸಲು ಸೂಚಿಸಿದೆ. ತಂತ್ರಾಂಶದಲ್ಲಿ ಅಳವಡಿಸಿರುವ ಮಾಹಿತಿಯಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಸಂಬಂದಿಸಿದ ಸಿ.ಆರ್.ಪಿ ರವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಈ ಮಾಹಿತಿಯನ್ನು ತಂತ್ರಾಂಶದಲ್ಲಿ ತುರ್ತಾಗಿ ಅಳವಡಿಸಲು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದೆ.

ಬಿ.ಕೆ.ಬಸವರಾಜು 27/7

ನಿರ್ದೇಶಕರು(ಪ್ರಾಥಮಿಕ ಶಿಕ್ಷಣ),ಹೆ.ಪ್ರ

ಪ್ರತಿಯನ್ನು:

1. ರಾಜ್ಯದಲ್ಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದಲ್ಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳು ಸಂಬಂಧಿಸಿದ ಸಿ.ಆರ್.ಪಿ ಗಳಿಗೆ ತುರ್ತಾಗಿ ಕಾರ್ಯನಿರ್ವಹಿಸುವಂತೆ ಸೂಚಿಸಲು ತಿಳಿಸಿದೆ.
3. ಕಛೇರಿ ಪ್ರತಿ.